

# ಮೊದಲ ಪ್ರೇಮಪತ್ರ

ಪತ್ರಗಳನ್ನು ಬರೆಯುವುದು ಒಂದು ಕಲೆ. ಅದರಲ್ಲೂ ಪ್ರೇಮ ನಿವೇದನೆಯನ್ನು ವ್ಯಕ್ತಪಡಿಸುವಂಥ ಪ್ರಣಯದೋಲೆಗಳನ್ನು ಓದುವುದೇ ಒಂದು ಅತ್ಯಂತ ಸೊಗಸಾದ ಅನುಭೂತಿ.

ವಾಟ್ಸಾಪ್, ಇಮೇಲ್ ಗಳಿರದ ಹಿಂದಿನ ಕಾಲದಲ್ಲಿ ಕೈ ಬರಹದಲ್ಲಿಯೇ ಬರೆದ ಪ್ರೇಮಪತ್ರಗಳು ಪ್ರೀತಿಸುವ ಎರಡು ಹೃದಯಗಳನ್ನು ಒಂದಾಗಿ ಬೆಸೆಯುವ ಸೇತುವೆಯಂತೆ ಕಾರ್ಯ ನಿರ್ವಹಿಸುತ್ತಿದ್ದವು. ಇಡೀ ವಿಶ್ವದಲ್ಲೇ ಮೊಟ್ಟ ಮೊದಲ ಪ್ರೇಮಪತ್ರ ಎಂದು ಹೇಳಲಾಗುವ ಪ್ರೇಮದೋಲೆಯನ್ನು ಬರೆದವರು ಯಾರಿರಬಹುದು ಎಂಬ ಕುತೂಹಲ ಎಲ್ಲರಲ್ಲಿರಬಹುದು.

ಪ್ರೇಮಿಗಳ ದಿನಾಚರಣೆಯನ್ನು ಆಚರಿಸುವ ಫೆಬ್ರುವರಿ ತಿಂಗಳಲ್ಲಿ ಮಾರ್ಗರಿ ಬ್ರೀವ್ಸ್ ಎಂಬ ಪ್ರೇಮಿಯು ತನ್ನ ಪ್ರಿಯತಮ ಜಾನ್ ಪ್ಯಾಟ್ಸನ್ ಗೆ ಬರೆದಿದ್ದ ಭಾವಪೂರ್ಣವಾದ ಓಲೆಯನ್ನು ಈಗ ಲಭ್ಯವಿರುವ ಮೊದಲ ಪ್ರೇಮ ಪತ್ರವೆಂದು ಪರಿಗಣಿಸಲಾಗಿದೆ. ಅಲ್ಲದೆ ಇದನ್ನು ಬ್ರಿಟಿಷ್ ಲೈಬ್ರರಿಯಲ್ಲಿ ಅತ್ಯಂತ ಸುರಕ್ಷಿತವಾಗಿ ಸಂರಕ್ಷಿಸಿ ಇಡಲಾಗಿದೆ. 1471 ನೇ ಇಸವಿಯಲ್ಲಿ ಇಂಗ್ಲಿಷ್ ನಲ್ಲಿ ಬರೆಯಲಾದ ಈ ಪತ್ರದಲ್ಲಿ ಮಾರ್ಗರಿ ಬ್ರೀವ್ಸ್ 'ನಾನು ಅನಾರೋಗ್ಯಳಾಗಿದ್ದು ಭೌತಿಕವಾಗಿ ಹಾಗೂ ಮಾನಸಿಕವಾಗಿ ಬಹಳಷ್ಟು ಕುಗ್ಗಿದ್ದೇನೆ. ನಿನ್ನ ಧ್ವನಿಯನ್ನು ಕೇಳದ ಹೊರತು ಗುಣಮುಖಳಾಗುವುದಿಲ್ಲ. ನನ್ನ ತಾಯಿ ವರದಕ್ಷಿಣೆ ಹಣವನ್ನು ಕೂಡಿಡಲು ತಂದೆಯ ಮನವೊಲಿಸುತ್ತಿದ್ದಾಳೆ. ಆದರೆ ಇದುವರೆಗೂ ಯಶಸ್ವಿಯಾಗಿಲ್ಲ. ನೀನು ನನ್ನನ್ನು ಪ್ರೇಮಿಸುವುದೇ ನಿಜವಾಗಿದ್ದರೆ ನನ್ನನ್ನು ಮದುವೆಯಾಗಲೇ ಬೇಕು. ನನ್ನನ್ನು ಒಂಟಿಯಾಗಿರಲು ನೀನು ಬಿಡುವುದಿಲ್ಲವೆಂದು ನಾನು ಬಹಳ ನಂಬಿದ್ದೇನೆ' ಎಂಬುದಾಗಿ ಬರೆದು ತನ್ನ ಪ್ರೀತಿಯನ್ನು ಉಲ್ಲೇಖಿಸಿದ್ದಾಳೆ. ನಂತರ ಮಾರ್ಗರಿ ಬ್ರೀವ್ಸ್ ಹಾಗೂ ಜಾನ್ ಪ್ಯಾಟ್ಸನ್ ಇವರಿಬ್ಬರ ಪ್ರೀತಿಯು ಮದುವೆಯಲ್ಲಿ ಸುಖಾಂತ್ಯವಾಗುತ್ತದೆ.

■ ವಿದ್ಯಾ ವಿ. ಹಾಲಭಾವಿ